# ಕ್ರಿಸ್ಮಸ್ ನಂಟಿನ ಪೊಯಿನ್ಸೆಟಿಯೆ

ಚಿತ್ರ– ಬರಹ:
**ಮಂಜುನಾಥ ಡಿ.ಎಸ್.**





**ಯು**ಫೋರ್ಬಿಯ ಪಲ್ಚೆರ್ರಿಮ ವೈಜ್ಞಾನಿಕ ಹೆಸರಿನ ಈ ಗಿಡಗಳು ಒಂದರಿಂದ ಮೂರು ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತವೆ. 1825ರಲ್ಲಿ ಮೆಕ್ಸಿಕೋಗೆ ಅಮೆರಿಕದ ಮೊದಲ ರಾಯಭಾರಿಯಾಗಿ ಬಂದ ರಾಬರ್ಟ್ಸ್ ಪೊಯಿನ್ಸೆಟ್ ಈ ಸಸ್ಯದ ಅಂದಕ್ಕೆ ಮಾರುಹೋದರು. ಇದನ್ನು ಸೌತ್ ಕ್ಯಾರೊಲಿನಕ್ಕೆ ತಂದು ತಮ್ಮ ತೋಟದಲ್ಲಿ ಬೆಳೆಯಲಾರಂಭಿಸಿದರು. ಕಾಲಕ್ರಮದಲ್ಲಿ ಪೊಯಿನ್ಸೆಟಿಯೆ ಎಂಬ ಹೆಸರಿನಿಂದ ಪ್ರಚಲಿತವಾಯಿತು.

ಈ ಸಸ್ಯಕ್ಕೂ ಕ್ರಿಸ್ಮಸ್ ಹಬ್ಬಕ್ಕೂ ಎಲ್ಲಿಲ್ಲದ ನಂಟು. ಉಷ್ಣವಲಯದ ಸಸ್ಯ ಅತ್ಯಂತ ಶೀತ ಮಾಸದಲ್ಲಿನ ಹಬ್ಬದ ಆಚರಣೆಯ ಒಳಾಂಗಣ ಅಲಂಕಾರದಲ್ಲಿ ಪ್ರಮುಖ ಪಾತ್ರವಹಿಸುವುದು ಅಚ್ಚರಿ ಮೂಡಿಸುತ್ತದೆ. ನಕ್ಷತ್ರವನ್ನು ಹೋಲುವ ಎಲೆಗಳ ವಿನ್ಯಾಸವನ್ನು ಸ್ಟಾರ್ ಆಫ್ ಬೆತ್ಲೆಹೆಂನ ಸಂಕೇತವೆಂದು ಪರಿಗಣಿಸಲಾಗುತ್ತದೆ. ಪತ್ರಗಳ ಕೆಂಪು ವರ್ಣ ಶಿಲುಬೆಗೇರಿದ ಕ್ರಿಸ್ತನ ರಕ್ತದ ಪ್ರತೀಕವೆಂದು ಹೇಳಲಾಗುತ್ತದೆ.

ಒಂದು ದಂತಕಥೆ ಮೆಕ್ಸಿಕೋದ ಬಡ ಬಾಲೆ ಪೆಪಿಟಳನ್ನು ಕುರಿತದ್ದು. ಕ್ರಿಸ್ಮಸ್ ಮುನ್ನಾ ದಿನದಂದು ಬಾಲ ಏಸುವಿಗೆ ಉಡುಗೊರೆ ನೀಡಲಾಗದ ಅಸಹಾಯಕತೆಯಿಂದ ಪರಿತಪಿಸುತ್ತಿದ್ದ ಆ ಹುಡುಗಿಯನ್ನು ಅವಳ ಸೋದರ ಸಂಬಂಧಿ ಪೆಡ್ರೊ ಪ್ರೀತಿಯಿಂದ 'ಅಲ್ಪ ಕಾಣಿಕೆ ನೀಡಿದರೂ ಏಸು ಸಂತುಷ್ಟನಾಗುವನು' ಎಂದು ಹೇಳಿ ಸಮಾಧಾನ ಪಡಿಸಿದನಂತೆ. ಇದರಿಂದ ಪ್ರೇರಿತಳಾದ ಆ ಹುಡುಗಿ, ಸನಿಹದಲ್ಲಿ ಬೆಳೆದಿದ್ದ ಕಳೆಯನ್ನೇ ಕಿತ್ತು ಕಟ್ಟಿದ ಗುಚ್ಛವನ್ನು ಬಾಲ ಕ್ರಿಸ್ತನಿಗೆ ಸಮರ್ಪಿಸಿದಾಗ ಅದು ಪ್ರಖರ ಕೆಂಬಣ್ಣದ ಹೂಗಳಾಗಿ ಪರಿವರ್ತನೆಯಾಯಿತಂತೆ. ಅಂದಿನಿಂದ ಈ ಹೂಗಳು 'ಫ್ಲವರ್ಸ್ ಆಫ್ ದಿ ಹೋಲಿ ನೈಟ್' ಎಂಬ ಹೆಸರಿನ ದೇವ ಪುಷ್ಪಗಳಾಗಿ, ಕ್ರಿಸ್ಮಸ್ ಹಬ್ಬದ ಅವಿಭಾಜ್ಯ ಅಂಗವಾದವಂತೆ.

ಪುರಾತನ ಅಜ್ಟೆಕ್ ಜನಾಂಗದವರು ಬಣ್ಣಗಳು, ಶೃಂಗಾರ ಸಾಧನಗಳು, ಮತ್ತು ಜ್ವರ ಶಮನಗೊಳಿಸುವ ಔಷಧಿಗಳ ತಯಾರಿಕೆಯಲ್ಲಿ ಈ ಸಸ್ಯವನ್ನು ಬಳಸುತ್ತಿದ್ದರಂತೆ. ಪ್ರತಿ ವರ್ಷ ಡಿಸೆಂಬರ್ 12 ಅಮೆರಿಕದಲ್ಲಿ ರಾಷ್ಟ್ರೀಯ ಪೊಯಿನ್ಸೆಟಿಯೆ ದಿನವಾಗಿ ಆಚರಿಸಲ್ಪಡುತ್ತದೆ.